ಪ್ರಶ್ನೆಗಳಿಗೆ 6 ತಿಂಗಳಾದರೂ ಕೂಡ ಉತ್ತರ ಬಂದಿಲ್ಲ. ನಿಯಮ 351ರ ಮೇಲೆ ಕೇಳಿದ ಪ್ರಶ್ನೆಗಳಿಗೆ ಕೂಡ ಇನ್ನುವರೆಗೆ ಉತ್ತರ ಬಂದಿರುವುದಿಲ್ಲ. ಸರ್ಕಾರದಿಂದ ನೋಟೀಸ್ ಕೊಟ್ಟರೂ ಕೂಡ ಉತ್ತರ ಕೊಡುತ್ತಿಲ್ಲ. ನನಗೆ ಉತ್ತರವನ್ನು ತರಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು :— ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಕೊಡುವುದಕ್ಕೆ ಯಾವ ಯಾವ ಮಂತ್ರಿಗಳು ಸಮಯವನ್ನು ಕೇಳಿದ್ದರು. ಉತ್ತರವನ್ನು ಕಳುಹಿಸಿಕೊಟ್ಟವರು ಯಾರು? ಕಳುಹಿಸಿ ಕೊಡದೇ ಇರುವವರು ಯಾರು ಎಂಬ ವಿವರಗಳನ್ನು ನಾನು ತರಿಸಿರುತ್ತೇನೆ. ಇದನ್ನು ನಾನು ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಮತ್ತು ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳ ಗಮನಕ್ಕೆ ತರುತ್ತೇನೆ, ಹಾಗೂ ಸದನದಲ್ಲಿ ಬಹಿರಂಗ ಪಡಿಸುತ್ತೇನೆ. ಈ ಅಧಿವೇಶನದಲ್ಲಿ ಯಾವ ಮಂತ್ರಿಗಳಿಗೂ ಕೂಡ ನಾನು ಉತ್ತರವನ್ನು ಕೊಡುವುದಕ್ಕೆ ಸಮಯಾವಕಾಶವನ್ನು ಕೊಡುವುದಿಲ್ಲ. ಇನ್ನು ಈ ಅಸೆಂಬ್ಲಿಗೆ ಹೆಚ್ಚು ದಿವಸ ಜೀವ ಉಳಿದಿಲ್ಲ. ಆದ್ದರಿಂದ ಇನ್ನು ನಾನು ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಅದನ್ನು ನಾನು ಖಂಡಿತವಾಗಿ ತೆಗೆದುಕೊಳ್ಳುತ್ತೇನೆಂಬ ಮಾತನ್ನು ಅಷ್ಟೇ ಹೇಳುತ್ತೇನೆ. ಉಳಿದ ವಿಚಾರವನ್ನು ಆಮೇಲೆ ಮಾತನಾಡೋಣ. ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ.

3. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಉದ್ಯಾನವನಗಳು.

(170) ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿರುವ ಉದ್ಯಾನವನಗಳೆಷ್ಟು? (ಪೂರ್ತಿ ವಿವರ ನೀಡುವುದು);

ಆ) ಈ ಉದ್ಯಾನವನಗಳ ಅಭಿವೃದ್ಧಿಗಾಗಿ 98-99ನೇ ಸಾಲಿನಲ್ಲಿ ಬೆಂಗಳೂರು ಮಹಾನಗರಪಾಲಿಕೆಯವರಿಂದ ಇಲ್ಲಿಯವರೆಗೆ ಮಂಜೂರು ಮಾಡಲಾಗಿರುವ ಹಣವೆಷ್ಟು? (ಉದ್ಯಾನವಾರು ವಿವರ ನೀಡುವುದು);

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :—

ಅ) ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿ ಒಟ್ಟು 267 ಉದ್ಯಾನವನಗಳಿದ್ದು (ದಕ್ಷಿಣ ಮತ್ತು ಉತ್ತರ ವಿಭಾಗಗಳು) ಇವುಗಳನ್ನು ಮಹಾನಗರಪಾಲಿಕೆ ಮತಿಯಿಂದ ನಿರ್ವಹಿಸಲಾಗುತ್ತಿದೆ. ಇವುಗಳಲ್ಲಿ 180 ಉದ್ಯಾನವನಗಳು ಮೊದಲಿನಿಂದಲೂ ಉತ್ತಮವಾಗಿನಿರ್ವಹಣೆ ಮಾಡಲಾಗುತ್ತಿದೆ. ಉಳಿದ 137 ಉದ್ಯಾನವನಗಳು ಬಿ.ಡಿ.ಎ., ಯಿಂದ ಹೊಸದಾಗಿ ಸೇರ್ಪಡೆಯಾಗಿದ್ದು ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ.

ಆ) ಈ ಉದ್ಯಾನವನದ ಅಭಿವೃದ್ಧಿಗೆ 98-99ನೇ ಸಾಲಿನಲ್ಲಿ ಒಂದು ಕೋಟಿ ರೂ.ಗಳನ್ನು (ದಕ್ಷಿಣ ಮತ್ತು ಉತ್ತರ ವಿಭಾಗಗಳು) ಮಂಜೂರು ಮಾಡಲಾಗಿದೆ. ಈ ಹಣವನ್ನು ಅಲಂಕಾರದ ಸಲಕರಣೆಗಳು ಸಿಮೆಂಟು ಟಬ್ಬುಗಳು, ಗಿಡಗಳು, ಮರ ರಕ್ಷಕಗಳು, ತೋಟಗಾರಿಕೆ ಸಲಕರಣೆಗಳು, ಕೀಟನಾಶಕ ಔಷಧಿಗಳು ಹಾಗೂ ವಿವಿಧ ಗೊಬ್ಬರಗಳು, ಇದು ಅಲ್ಲದೇ ವಿಶೇಷವಾಗಿ ಹರಿಹರ ಗುಡ್ಡ ಹಾಗೂ ಕೆಂಪೇಗೌಡ ಪೌರಸಭಾಂಗಣದ ಸುತ್ತಲೂ ಸುಂದರ ಉದ್ಯಾನವನವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ಉದ್ಯಾನವನಗಳ ಹಾಗೂ ವೃತ್ತಗಳ ಸುತ್ತಲೂ ಬೇಲಿ ಹಾಕಲು ಪಾದಚಾರಿ ರಸ್ತೆ ನಿರ್ಮಾಣಮಾಡಲು ನೀರಿನ ತೊಟ್ಟಿ ನಿರ್ಮಿಸಲು, ಕೊಳವೆ ಬಾವಿ ತೆಗೆಯಲು, ಕಾವಲುಗಾರನ ಮನೆ ಕಟ್ಟಲು, ಬೆಂಚುಗಳನ್ನು ಹಾಕಲು, ದಕ್ಷಿಣ ಮತ್ತು ಉತ್ತರ ವಿಭಾಗಗಳಿಗೆ 2,47,91, 000.00 ರೂ.ಗಳನ್ನು ಮಂಜೂರು ಮಾಡಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಸಭಾಧ್ಯಕ್ಷರೆ, ಬೆಂಗಳೂರು ನಗರದಲ್ಲಿ 267 ಉದ್ಯಾನವನಗಳು ಇವೆ. ಅದರಲ್ಲಿ 130 ಚೆನ್ನಾಗಿ ಮೇನ್‌ಟೇನ್ ಮಾಡುತ್ತಿದ್ದಾರೆ. ಉಳಿದಿದ್ದು ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ಬೆಂಗಳೂರು ನಗರಕ್ಕೆ ಉದ್ಯಾನವನಗಳ ನಗರ ಎಂದು ಬಹಳ ವರ್ಷಗಳಿಂದ ಹೆಸರು ಇದೆ. ಆದರೆ ಈ ಉದ್ಯಾನ ವನಗಳಿಗೆ ಹಣ ಏನು ಖರ್ಚು ಮಾಡುತ್ತಿದ್ದಾರೆ ಇದು ತೀರಾ ಏನೇನೂ ಸಾಲದು. ಬಹಳಷ್ಟು ಉದ್ಯಾನವನಗಳಿಗೆ ಫೆನ್ಸಿಂಗ್ ಇರುವುದಿಲ್ಲ. ನಮ್ಮ ಕೃಷ್ಣರಾವ್ ಪಾರ್ಕ್ ರಸ್ತೆ ಅದೇ ರೀತಿಯಾಗಿ ನಂದಾ ಥಿಯೇಟರ್ ರೋಡ್ ಸುಮಾರು 3-4 ಕಿ.ಮೀ. ಇದೆ. ಅಲ್ಲಿರುವ ಉದ್ಯಾನವನದಲ್ಲಿ ಹಸುಗಳು ಮತ್ತು ಎಮ್ಮೆಗಳು ಮೇಯುತ್ತಿರುತ್ತವೆ. ಈಗ ಕೊಡುವ ಹಣವನ್ನು ಕಾರ್ಪೊರೇಷನ್‌ನ ಬಾಬತ್ತಿಗೆ ಹೆಚ್ಚಿಗೆ ಕೊಡಬೇಕು. ಹೀಗಾಗಿ ಎಲ್ಲಾ ಪಾರ್ಕ್‌ಗಳುಅಭಿವೃದ್ಧಿ ಆಗುವುದಿಲ್ಲ. ಮತ್ತೆ ನಮ್ಮ ಸುದ್ದಗುಂಟೆ ಪಾಳ್ಯ ಪಾರ್ಕ್ ಸುಮಾರು 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭವಾಯಿತು. ಅದು ಸುಮಾರು ಒಂದು ವರ್ಷದಿಂದ ನಿಂತು ಹೋಗಿದೆ. ಅದರ ಬಗ್ಗೆ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ವಿ. ಸೋಮಣ್ಣ:— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಹಾಗೆ ಪ್ರಾಯಶಃ ಹೊಸದಾಗಿ ಬಂದಿರತಕ್ಕಂಥ 130 ಬಿ.ಡಿ.ಎ. ಪಾರ್ಕ್‌ಗಳನ್ನು ಈ ಸಾರಿ ಅಭಿವೃದ್ಧಿ ಪಡಿಸುವುದಕ್ಕೋಸ್ಕರ 2,47,91,000-00 ರೂಪಾಯಿಗಳನ್ನು 1999-2000 ಸಾಲಿನ ಆಯವ್ಯಯದಲ್ಲಿ ಮುಂಗಡವಾಗಿ ಇಟ್ಟಿದ್ದೇವೆ. ಈಗಾಗಲೇ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಬೆಂಗಳೂರು ನಗರದಲ್ಲಿರುವ ನಂದ ಥಿಯೇಟರ್ ಮತ್ತು ಸೌತ್‌ಎಂಡ್ ಹತ್ತಿರ ದೊಡ್ಡ ದೊಡ್ಡ ಬೂಲ್ ವಾರ್ಡ್‌ಗಳ ಬಗ್ಗೆ ನಾನು ಅರಣ್ಯ ಇಲಾಖಾ ಸಚಿವರ ಜೊತೆ ಸಂಪರ್ಕ ಬೆಳೆಸಿ ವಿನಂತಿ ಮಾಡಿಕೊಂಡಿದ್ದೇನೆ. ಈಗ ಇರತಕ್ಕಂಥ ಬೂಲ್ ವಾರ್ಡ್‌ಗಳ ನಿರ್ವಹಣೆಯನ್ನು ಮಹಾನಗರಪಾಲಿಕೆ ಸರಿಯಾಗಿ ಕೆಲಸವನ್ನು ನಿರ್ವಹಿಸುತ್ತಿಲ್ಲ ಎನ್ನುವುದರ ಬಗ್ಗೆ ನಾವೂ ಕೂಡ ಗಮನವನ್ನು ಹರಿಸಿ ಎಲ್ಲೆಲ್ಲಿ 2 ರಿಂದ 3 ಕಿ.ಮಿ. ಇರತಕ್ಕಂಥಹ ಬೂಲ್ ವಾರ್ಡ್‌ಗಳನ್ನು ನಾನು ಅರಣ್ಯ ಇಲಾಖೆಯವರಿಗೆ ವಹಿಸುವ ಬಗ್ಗೆ 3 ದಿವಸಗಳ ಹಿಂದೆ ಒಂದು ಸಭೆಯನ್ನು ನಡೆಸಿದ್ದೇನೆ. ಮಾನ್ಯ ಅರಣ್ಯ ಸಚಿವರು ಹಾಗೂ ತಮ್ಮನ್ನೂ ಸಹ ಜೊತೆಯಲ್ಲಿ ಕರೆದುಕೊಂಡು ಹೋಗಿ ಕಾಡುಗಳನ್ನು ಬೆಳೆಸುವುದಕ್ಕೆ ಇರತಕ್ಕಂಥಹ ವ್ಯವಸ್ಥೆಯ ಬಗ್ಗೆ ನೋಡೋಣ. ಹಾಗೆಯೇ ಉಳಿದಿರತಕ್ಕಂಥದ್ದರ ಬಗ್ಗೆ ಅಭಿವೃದ್ಧಿ ಪಡಿಸಿ, ಹಳೆಯ 130 ಉದ್ಯಾನವನಗಳಿಗೆ ಕೆಲವು ಕಡೆ ಮುಳ್ಳುತಂತಿಯನ್ನು ಹಾಕುವುದಾಗಲಿ ಇವೆಲ್ಲವೂ ಕೂಡ ಅವ್ಯವಸ್ಥೆಯಾಗಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಈ ಕಾರ್ಯವನ್ನು ತಕ್ಷಣವೇ ತೆಗೆದುಕೊಳ್ಳುವುದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈ ವರ್ಷ 2,47,91,000 ರೂಪಾಯಿಗಳನ್ನು ಈ ಕಾರ್ಯಕ್ಕೋಸ್ಕರ ವಿನಿಯೋಗ ಮಾಡುತ್ತಿದ್ದೇವೆ. ಒಂದು ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಾದ ಗೊಬ್ಬರ, ಕ್ರಿಮಿನಾಶಕ ಸಾಮಗ್ರಿಗಳನ್ನು ತೆಗೆದುಕೊಳ್ಳುವುದಕ್ಕೆ ಬಳಸುತ್ತಿದ್ದೇವೆ. ಇನ್ನು 8-10 ದಿನಗಳಲ್ಲಿ ವಿಧಾನಸಭೆಯ ಅಧಿವೇಶನ ನಡೆಯುವಾಗಲೇ ಮತ್ತೊಂದು ಬಾರಿ ಬೆಂಗಳೂರು ನಗರದ ಗೌರವಾನ್ವಿತ ಸದಸ್ಯರ ಸಭೆಯನ್ನು ಕರೆದು ತಕ್ಷಣವೇ ಅಂತಹ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಒಂದು ಪಟ್ಟಿಯನ್ನು ಮಾಡಿ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತೇ ತಮ್ಮ ಕ್ಷೇತ್ರದಲ್ಲಿ ಬರುವ ಸುದ್ದಗುಂಟೆಪಾಳ್ಯದಲ್ಲಿ 3 ಕೋಟಿ ರೂಪಾಯಿಗಳ ಅವ್ಯವಹಾರದ ಬಗ್ಗೆ ಇವತ್ತು ಬೆಳಿಗ್ಗೆ ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ತಾವೂ ಕೂಡ ಯಾವುದಾದರೂ ಒಂದು ದಿನ ಬಿಡುವು ಮಾಡಿಕೊಂಡು ವೇಳೆಯನ್ನು ಕೊಟ್ಟರೆ ನಾನು ಸ್ಥಳಕ್ಕೆ ಬಂದು ಅದರ ಬಗ್ಗೆ ಏನು ಸೂಕ್ತವಾದ ಕೆಲಸಕಾರ್ಯಗಳನ್ನು ಮಾಡಬಹುದು ಆ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರಾಮಲಿಂಗಾರೆಡ್ಡಿ:— ಮಾನ್ಯ ಅಧ್ಯಕ್ಷರೆ, ಈ ಉದ್ಯಾನವನಗಳ ಅಭಿವೃದ್ಧಿಗೋಸ್ಕರವಾಗಿಯೇ ಕಾರ್ಪೊರೇಷನ್‌ನಲ್ಲಿ ಒಂದು ಸ್ಥಾಯೀ ಸಮಿತಿಯನ್ನು ಮಾಡಿದ್ದಾರೆ. ಇದರ ಅಭಿವೃದ್ಧಿಗೆ ಇಷ್ಟು ಹಣವನ್ನು ಒದಗಿಸಿದರೆ ಆ ಕೆಲಸವು ಸರಿಯಾಗಿ ಆಗುವುದಿಲ್ಲ. ಈ ವರ್ಷದ ಮಾರ್ಚ್‌ನಲ್ಲಿ ಬರುವ ಬಜೆಟ್‌ನಲ್ಲಿ ಇದರ ಅಭಿವೃದ್ಧಿಗೋಸ್ಕರವಾಗಿ ಹೆಚ್ಚಿನ ಹಣವನ್ನು ಈ ಸಮಿತಿಗೆ ಉದ್ಯಾನವನಗಳ ಅಭಿವೃದ್ಧಿಗಾಗಿ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ:— ಈ ಉದ್ಯಾನವನಗಳ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಬೇಕಾದರೂ ಕೊಡೋಣ. ಆದರೆ ಅಲ್ಲಿ ಅಭಿವೃದ್ಧಿ ಕೆಲಸವಾಗಬೇಕಾಗಿದೆ. ಮೊದಲು 2.47 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿ. ಇನ್ನು ಹೆಚ್ಚಿಗೆ ಹಣ ಬೇಕಾದರೆ ತಾವು ಏನಾದರೂ ಸಲಹೆಯನ್ನು ಕೊಡಿ. ಯಾವುದು ಸೂಕ್ತವಾಗಿದೆ ಅದನ್ನು ತೆಗೆದುಕೊಂಡು ಆ ರೀತಿ ಮಾಡುತ್ತೇವೆ. ಒಟ್ಟಿನಲ್ಲಿ ಈ ಹಣದ ಖರ್ಚು ಸಾರ್ವಜನಿಕವಾಗಿ ವಿನಿಯೋಗವಾಗಬೇಕು ಮತ್ತು ಉದ್ಯಾನವನಗಳ ಅಭಿವೃದ್ಧಿಯಾಗಬೇಕು. ತಾವು ಯಾವ ರೀತಿ ಸಲಹೆಗಳನ್ನು ಕೊಡುತ್ತಿರೋ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನಾನು ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ:— ಸನ್ಮಾನ್ಯ ಅಧ್ಯಕ್ಷರೆ, ನಾನು ಮೊಟ್ಟಮೊದಲನೆಯದಾಗಿ ಸನ್ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಕೃತಜ್ಞತೆಗಳನ್ನು ಹೇಳುತ್ತಿದ್ದೇನೆ. ಏಕೆಂದರೆ ಮೊದಲನೆಯ ಪ್ರಶ್ನೆಯನ್ನು ಪರಿಸರ ಶುದ್ಧವಾಗಿರುವ ಬಗ್ಗೆ ಕೇಳಿದ್ದಾರೆ. ಬೆಂಗಳೂರು ನಗರದಲ್ಲಿ Karnataka Parks and playfields (Preservation of park and Open Space)Act, 1985, Under Section 7 and 8, ಇದರ ಪ್ರಕಾರ ಸನ್ಮಾನ್ಯ ಸಚಿವರು 267 ಉದ್ಯಾನವನಗಳು ಇದೆ ಎಂದು ಹೇಳುತ್ತಿದ್ದಾರೆ. ಸೆಕ್ಷನ್-8ರ ಪ್ರಕಾರ ಯಾವುದಾದರೂ ಪಾರ್ಕ್‌ಗಳನ್ನು ಕೆಲವು ರಾಜಕಾರಣಿಗಳು, ಬ್ರೋಕರ್‌ಗಳು ಮತ್ತು ಕೆಲವು ಲ್ಯಾಂಡ್ ಗ್ರಾಬರ್ಸ್‌ಗಳು ಸೇರಿಕೊಂಡು ಆ ಪಾರ್ಕ್‌ಗಳಿಗೆ ಖಾತೆಯನ್ನು ಮಾಡಿಕೊಟ್ಟು ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯಾ? ಬಂದಿದ್ದರೆ ಇದರ ಬಗ್ಗೆ ತಾವು ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಈ ಕಾರ್ಪೊರೇಷನ್‌ನ ಲೀಗಲ್ ಸೆಲ್‌ನವರು ಇದನ್ನು ಉಳಿಸುವಲ್ಲಿ ಏನು ಪ್ರಯತ್ನ ಮಾಡಿದ್ದಾರೆ? ಇದು ತಮ್ಮ ಗಮನಕ್ಕೆ ಬಂದಿದ್ದರೆ ಈ ಸಭೆಗೆ ತಿಳಿಸಬೇಕೆಂದು ಹೇಳಿ ತಮ್ಮಲ್ಲಿ ಮನವಿ ಮಾಡುಕೊಳ್ಳುತ್ತಿದ್ದೇನೆ.

ಶ್ರೀ ವಿ. ಸೋಮಣ್ಣ:— ಮಾನ್ಯ ಗೌರವಾನ್ವಿತ ಸದಸ್ಯರು ಆ ರೀತಿ ಅವ್ಯವಹಾರವಾಗಿರುವ ಬಗ್ಗೆ ಮಾಹಿತಿಯನ್ನು ಕೊಟ್ಟರೆ ಕಾನೂನಿನ ಚೌಕಟ್ಟಿನೊಳಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಖಂಡಿತ ತೆಗೆದುಕೊಳ್ಳುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ :— ಸುಮಾರು 20 ಎಕರೆ ಇರುವ ಭೈರಸಂದ್ರ, ಕೆರೆ ಇದು 20 ಎಕರೆ ಕೆರೆಯ ಅಂಗಳದ ಮೇಲೆ ಯಾರೋ ಹೋಗಿ ಕೋರ್ಟಿನಲ್ಲಿ ಸ್ಟೇಯನ್ನು ತಂದಿದ್ದಾರೆ. ಸುಮಾರು 2 ವರ್ಷಗಳಿಂದ ಸ್ಟೇಯನ್ನು ವೆಕೇಟ್ ಮಾಡಲು ಪ್ರಯತ್ನ ಮಾಡಿದರೂ ಕೂಡ ಸ್ಟೇ ವೆಕೇಟ್ ಆಗುತ್ತಿಲ್ಲ. ಆ ಕೆರೆನೇ ನಮ್ಮದು ಎಂದು ಅವರು ಸ್ಟೇಯನ್ನು ತಂದಿದ್ದಾರೆ. ಮೊದಲು ಸ್ಟೇಯನ್ನು ವೆಕೇಟ್ ಮಾಡಿಸಿ ಪಾರ್ಕ್‌ಗೆ ಅಭಿವೃದ್ಧಿ ಪಡಿಸಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಬನಪ್ಪ ಪಾರ್ಕ್, ಎಸ್.ಜೆ.ಪಿ. ಪಾರ್ಕ್ ಮತ್ತು ಮಕ್ಕಳ ಕೂಟ ಪಾರ್ಕ್ ಈ ಮೂರು ಇದೆ. ಈ ಬನಪ್ಪ ಪಾರ್ಕ್‌ನ್ನು ಮಕ್ಕಳಿಗೋಸ್ಕರವಾಗಿ ಪರಿವರ್ತನೆ ಮಾಡುವುದಕ್ಕೆ ಮತ್ತು ಈಗಿರತಕ್ಕಂತಹ ಮಕ್ಕಳ ಕೂಟ ಪಾರ್ಕ್‌ನ್ನು ಸರಿ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ? ಈಗ ಎಸ್.ಜೆ.ಪಿ. ಪಾರ್ಕ್ ತುಂಬಾ ಹಾಳಾಗಿ ಹೋಗಿದೆ. ಆದುದರಿಂದ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ಹೇಳಬೇಕು.

ಶ್ರೀ ವಿ. ಸೋಮಣ್ಣ :— ಈ ವಿಷಯದ ಬಗ್ಗೆ ನನ್ನ ಕಳಕಳಿ ಇಷ್ಟೆ. ತಾವೆಲ್ಲಾ ಸೇರಿ ಒಟ್ಟಿಗೆ ಏನು ಸಲಹೆಗಳನ್ನು ಕೊಡುತ್ತೀರಿ, ನಾವು ಅವುಗಳನ್ನು ಕಾರ್ಯರೂಪಕ್ಕೆ ತರುತ್ತೇವೆ. ಇದರ ಬಗ್ಗೆ ತಾವು ಕೂಡ ಮುತುವರ್ಜಿಯನ್ನು ವಹಿಸಬೇಕಾಗುತ್ತದೆ. ಎಲ್ಲಾ ಕೆಲಸಗಳನ್ನು ನಾನು ಸಚಿವನಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ದಯಮಾಡಿ ನಿಮ್ಮ ನಿಮ್ಮ ಭಾಗದಲ್ಲಿರತಕ್ಕಂತಹ ಪಾರ್ಕ್‌ಗಳ ಬಗ್ಗೆ ಒಂದು ಪಟ್ಟಿಯನ್ನು ಕೊಡಿ. ನಾವು ಆದ್ಯತೆಯ ಮೇಲೆ ಕೆಲಸಗಳನ್ನು ಕೊಟ್ಟು ಅಭಿವೃದ್ಧಿಪಡಿಸುತ್ತೇವೆ. ಮಾನ್ಯ ರಾಮಲಿಂಗಾರೆಡ್ಡಿಯವರು ಭೈರಸಂದ್ರ ಕೆರೆಯ ಬಗ್ಗೆ ಹೇಳಿದ್ದಾರೆ. ನಾನೂ ಕೂಡ ಆ ಕೆರೆಯನ್ನು ಹೋಗಿ ನೋಡಿ ಬಂದಿದ್ದೇನೆ. ಕೆಲವರು ಬೇನಾಮಿ ರೆಹಾರ್ಡ್‌ಗಳನ್ನು ಮಾಡಿರುವುದನ್ನು ನಾನೂ ಸಹ ಒಂದು ಸಾರಿ ಹೋಗಿ ನೋಡಿ ಬಂದಿದ್ದೇನೆ. ಇದಕ್ಕಾಗಿ ಇವತ್ತು ಫಾರೆಸ್ಟ್ ಆಕ್ಟ್ ಸ್ಪೆಸಿಫಿಕ್ ಆಗಿದೆ. ಎಲ್ಲಾ ಕೆರೆಗಳನ್ನು ಫಾರೆಸ್ಟ್‌ನವರಿಗೆ ವಹಿಸಬೇಕು ಎಂದು ತೀರ್ಮಾನವನ್ನು ಇನ್ನು 3-4 ದಿವಸದೊಳಗಾಗಿ ತೆಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಬೆಂಗಳೂರು ನಗರದ ಗೌರವಾನ್ವಿತ ಶಾಸಕರ ಸಭೆಯನ್ನು ಕರೆಯುತ್ತಿದ್ದೇನೆ. ಯಾವುದನ್ನು ಫಾರೆಸ್ಟ್ ಮಾಡಬೇಕು, ಯಾವುದನ್ನು ತೆರವು ಮಾಡಿಸಬೇಕು ಎಲ್ಲವನ್ನೂ ಕೂಡ ನಾವು ಆದ್ಯತೆಯ ಮೇರೆಗೆ ಮಾಡತಕ್ಕಂತಹ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ :— ಮಾನ್ಯ ಅಧ್ಯಕ್ಷರೆ, ಈ ಎಂ.ಎನ್. ಕೃಷ್ಣರಾವ್ ಪಾರ್ಕ್ ಬಹಳ ಹೆಸರುವಾಸಿಯಾದ ಪಾರ್ಕ್. ಆ ಪಾರ್ಕ್‌ನ ಗ್ರಹಚಾರ ಏನಾಗಿದೆ ಎಂದರೆ, ಆ ಪಾರ್ಕ್ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಸೇರಿದೆ. ಆ ಇಲಾಖೆಯವರೂ

ಸಹ ಇದರ ಅಭಿವೃದ್ಧಿಯ ಕಡೆ ತಿರುಗಿ ನೋಡುವುದಿಲ್ಲ. ಇದರ ಅಭಿವೃದ್ಧಿಯನ್ನು ನೋಡಿಕೊಳ್ಳುವುದಕ್ಕೆ ತೋಟಗಾರಿಕೆ ಇಲಾಖೆಯವರಿಗೆ ವಹಿಸಿದ್ದಾರೆ. ಈಗ ಅದನ್ನು ಕಾರ್ಪೊರೇಷನ್ ನವರು ವಹಿಸಿಕೊಂಡು, ಅಂದರೆ The Corporation should take over that park. ಆ ಪಾರ್ಕ್‌ನ್ನು ಸುಸ್ಥಿತಿಗೆ ತರಲು ಪ್ರಯತ್ನಪಡುತ್ತೀರಾ?

ಶ್ರೀ ವಿ. ಸೋಮಣ್ಣ :— ಮಾನ್ಯ ನಂಜೇಗೌಡರು ಹೇಳಿರುವ ವಿಚಾರ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಬೆಂಗಳೂರು ನಗರದಲ್ಲಿರತಕ್ಕಂತಹ ತಮ್ಮ ವ್ಯಾಪ್ತಿಯಲ್ಲಿರತಕ್ಕಂತಹ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವ ಕಡೆ ನೋಡೋಣ. ತೋಟಗಾರಿಕೆ ಇಲಾಖೆಯವರಿಗೆ ಸೇರಿದ್ದರೆ ಅವರನ್ನು ಕರೆಸಿ ಕೇಳೋಣ. ಮಾನ್ಯ ನಂಜೇಗೌಡರು ಈ ಸದನದ ಹಿರಿಯ ಸದಸ್ಯರಾಗಿದ್ದಾರೆ.

ಅಧ್ಯಕ್ಷರು :— ಅವರು ಹೇಳಿದ್ದನ್ನೆಲ್ಲಾ ಒಪ್ಪಿಯೇ, ಅವರು ಈ ಸ್ಥಿತಿಗೆ ಬಂದಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಿಮ್ಮ ಮೇಲೆ ಸರ್ಕಾರದ ವಿಶೇಷವಾದ ಪ್ರೀತಿ ಇರುವಂತೆ ಕಾಣುತ್ತದೆ. ಸರ್ಕಾರದವರು ಹೇಳಿದ್ದೆಲ್ಲಾ ಒಪ್ಪಿಕೊಳ್ಳುತ್ತೇವೆಂದರೆ ಸ್ವಲ್ಪ ವಿಶೇಷವಾದ ಪ್ರೀತಿ ಇದ್ದಂತೆ ಕಾಣುತ್ತದೆ.

ಶ್ರೀ ವಿ. ಸೋಮಣ್ಣ :— ತೋಟಗಾರಿಕೆ ಇಲಾಖೆಯವರಿಗೆ ಆ ಪಾರ್ಕ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ಆಗುವುದಿಲ್ಲವೆಂದರೆ ಮಹಾನಗರಪಾಲಿಕೆಯವರು ಅದನ್ನು ವಹಿಸಿಕೊಂಡು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಯಾವ ಯಾವ ಭಾಗದಲ್ಲಿ ಕೆಲಸ ಮಾಡಬೇಕು ಎಂಬ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಎನ್. ಜ್ಯೋತಿರೆಡ್ಡಿ :— ಕೆರೆಗಳ ಎನ್‌ಕ್ರೋಚ್‌ಮೆಂಟ್ ಬಗ್ಗೆ ಮಾತನಾಡುತ್ತಿದ್ದಾರೆ. ರೂರಲ್ ಏರಿಯಾದಲ್ಲೂ ಸಹ ಕೆರೆಗಳನ್ನು ನಮ್ಮದೇ ಕೆರೆ ಎಂದು ಖಾಸಗಿಯವರು ಎನ್‌ಕ್ರೋಚ್ ಮಾಡಿರುವಂತಹ ಪ್ರಕರಣಗಳು ಇವೆ. ಗೌರಿಬಿದನೂರು ತಾಲ್ಲೂಕಿನಲ್ಲಿಯೂ ಆ ತರಹ ನಡೆದಿದೆ.

ಅಧ್ಯಕ್ಷರು :— ಅದು ಬೇರೆ ವಿಷಯವಾಯಿತು. ಕೆರೆ ನಮ್ಮದು ಎಂದು ಹೇಳಿ ಕಬ್ಜ ಮಾಡಿಕೊಳ್ಳುವುದು ಊರಿನಲ್ಲಿ ಬೇರೆ ವಿಚಾರವಾಯಿತು. ಇಲ್ಲಿ ಪಾರ್ಕಿಗೆ ಸಂಬಂದಿಸಿದಂತಹ ಪ್ರಶ್ನೆ ಇರುವುದು. ನಿಮ್ಮ ಸಮಸ್ಯೆ ನಮಗೆ ಗೊತ್ತಿದೆ. ಸರಿಯಾದ ಸಮಯದಲ್ಲಿ ನಿಮ್ಮನ್ನು ಕರೆಯುತ್ತೇನೆ. ಆ ದಿವಸ ಸಭೆಯಲ್ಲಿ ನೀವು ಹಾಜರಿದೀರಿ.

ಶ್ರೀ ಎನ್. ರಾಜಣ್ಣ:— ಈ ಪ್ರಿಸರ್‌ವೇಷನ್ ಆಫ್ ಪಾರ್ಕ್ ಅಂಡ್ ಪ್ಲೇಗ್ರೌಂಡ್ ಆಕ್ಟ್, 1985ಗೆ ನಮ್ಮ ಬೆಂಗಳೂರು ನಗರದಲ್ಲಿ ಮಾನ್ಯತೆ ಏನಾದರೂ ಸಿಗುತ್ತದೆಯೇ? ಸಿಕ್ಕಲಿಲ್ಲ ಎಂದರೆ ನಾವು ಎಷ್ಟು ಹೋರಾಟ ಮಾಡಿದರೂ ಪಾರ್ಕ್‌ಗಳನ್ನು ಉಳಿಸುವುದಕ್ಕೆ ಆಗುತ್ತಿಲ್ಲ. I want to bring to your notice, 1991ನೇ ಇಸವಿಯಲ್ಲಿ ವಾರ್ಡ್ ನಂ:86 ರಲ್ಲಿ ಒಂದು ಪಾರ್ಕ್‌ಗೆ ಖಾತಾ ಮಾಡಿಕೊಡುತ್ತಾರೆ. ಅದಕ್ಕೆ ನಮ್ಮ ಸರ್ಕಾರ ಬಂದ ಮೇಲೆ ಹೋರಾಟ ಮಾಡಿ ಪೊಲೀಸ್‌ಗೆ ಹ್ಯಾಂಡ ಓವರ್ ಮಾಡಿ ಬೆಂಗಳೂರು ಸಿಟಿ ಕಾರ್ಪೊರೇಷನ್ನಿನ ಲೀಗಲ್ ಸೆಲ್‌ಗೆ ತಿಳಿಸಿದ ಮೇಲೆ ಇದು ನಮ್ಮ ಕೈಗೆ ಸಿಗಲು ಏಳು ವರ್ಷವಾಯಿತು. ಎನ್‌ಕ್ರೋಚ್‌ಮೆಂಟ್ ಮತ್ತು ಪಾರ್ಕ್ ಖಾತೆ ಮಾಡಿಕೊಡುವುದು ಜಾಸ್ತಿಯಾಗಿದೆ. I must also thank the legal cell of the Bangalore City Corporation. They are taking all efforts to save the park... ಬಹಳ ಕಷ್ಟಕ್ಕೆ ಬಂದಿದೆ. ದಯವಿಟ್ಟು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, 260 ಆಥವಾ 270 ಪಾರ್ಕ್‌ಗಳ ಸಂಖ್ಯೆಯನ್ನು ಏನು ಇಲ್ಲಿ ಹೇಳಿದ್ದಾರೆ, ಇದು 10 ಲಕ್ಷ ಜನಸಂಖ್ಯೆ ಇರುವಾಗ ಇದ್ದಂತಹ ಪಾರ್ಕ್. ಇವತ್ತು 50 ಲಕ್ಷ ಜನಸಂಖ್ಯೆ ಇದೆ. ಆದ್ದರಿಂದ ಜಾಸ್ತಿ ಪಾರ್ಕ್‌ಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ? ಏಕೆಂದರೆ ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ ಗಾಳಿ ಕೆಟ್ಟಿದೆ.

ಅಧ್ಯಕ್ಷರು:— ನೀವು ಉಪ ಪ್ರಶ್ನೆಯನ್ನು ಕೇಳಿ. ಕಡೆಯ ಅಧಿವೇಶನ ಬಂದರೂ ನೀವು ಇನ್ನೂ ಜಾಗೃತರಾಗಿಲ್ಲ. ಉಪ ಪ್ರಶ್ನೆಯನ್ನು ಅಷ್ಟೇ ಮಾತ್ರ ಕೇಳಬೇಕು. ಅದಕ್ಕೆ ಉತ್ತರ ಕೊಡಿಸುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪಮೊಯಿಲಿ:— ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ನಾವೇನು ಕಾಣುತ್ತಿದ್ದೇವೆಂದರೆ, ಪಾರ್ಕುಗಳು ಆಟದ ಮೈದಾನಗಳಾಗುತ್ತಿವೆ. ಆಟದ ಮೈದಾನಗಳು ಪೂಜಾ ಸ್ಥಳಗಳಾಗುತ್ತಿವೆ. ರಾತ್ರಿಹಗಲು ಆಗುವಾಗ ಇವೆಲ್ಲಾ ಆಗುತ್ತಿವೆ. ಆದ್ದರಿಂದ ಇವತ್ತು ಅನೇಕ ಪಾರ್ಕ್‌ಗಳು ರೂಪಾಂತರವಾಗಿವೆ. ಆದ್ದರಿಂದ ತಾವು ಪಾರ್ಕ್ ಆಕ್ಟನ್ನು ತಿದ್ದುಪಡಿ ಮಾಡಿ. ಪಾರ್ಕ್ ಎಂದರೆ ಯಾವುದು ಎಂದು ಅದರಲ್ಲಿ ಬಹಳ ಸ್ಪಷ್ಟವಾಗಿ ನಮೂದಿಸಿ. ಅದರಲ್ಲಿ ಬೇರೆ ಯಾವುದೇ ಚಟುವಟಿಕೆಗಳು ಆಗದ ರೀತಿಯಲ್ಲಿ ಒಂದುಕಟ್ಟುನಿಟ್ಟಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ವಿ. ಸೋಮಣ್ಣ:— ನಿನ್ನೆ 4 ಗಂಟೆಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಮತ್ತು ಅಧ್ಯಕ್ಷರು ಬೆಂಗಳೂರು ಮಹಾನಗರಪಾಲಿಕೆಯ ಆಯುಕ್ತರ ಜೊತೆ ಸುಮಾರು 2 ಗಂಟೆಗಳ ಕಾಲ ಚರ್ಚೆ ಮಾಡಿ ಯಮ್ಮಾವುದು ಪಾರ್ಕ್ ಮತ್ತು ಪ್ಲೇಗ್ರೌಂಡ್ ಎಂದು ಈಗಾಗಲೇ ಸಿ.ಡಿ.ಪಿ.ನಲ್ಲಿ ಗುರುತಿಸಿದ್ದಾರೆ.

ಬಡಾವಣೆಯ ಮ್ಯಾಪಿನಲ್ಲಿ ಗುರುತಿಸಿರುವ ಎಲ್ಲಾ ಜಾಗಗಳಿಗೆ ಇನ್ನೂ ಒಂದು ತಿಂಗಳೊಳಗೆ ಇದು ಪಾರ್ಕ್ ಇದು ಆಟದ ಮೈದಾನ ಎಂದು ನಾಮಫಲಕಗಳನ್ನು ಹಾಕುವುದಕ್ಕೆ ನಾನು ಸೂಚನೆಯನ್ನು ನೀಡಿದ್ದೇನೆ.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ವೀರಪ್ಪಮೊಯಿಲಿಯವರು ಕೇಳಿದ ಪ್ರಶ್ನೆಯ ನಿಗೂಢ ಅರ್ಥವನ್ನು ತಾವು ಗ್ರಹಿಸಲಿಲ್ಲ. ಅವರು ಹೇಳತಕ್ಕದ್ದು ರಾತ್ರೋರಾತ್ರಿ ಒಂದು ಪಾರ್ಕಿನಲ್ಲಿ ಒಂದು ದೇವಾಲಯ ಕಟ್ಟುವುದು, ಮಸೀದಿ ಕಟ್ಟುವುದು ಅಥವ ಇನ್ನಾವುದೋ ಮಾಡುವುದು, ರಸ್ತೆಗೆ ಅಡ್ಡಲಾಗಿ ಕಟ್ಟುವುದು ಅಲ್ಲಿಯ ಜನರ ಭಾವನೆಯನ್ನು ಕೆರಳಿಸುವುದು, ಯಾವ ಉದ್ದೇಶಕ್ಕೆ ಆ ಜಾಗ ಇರುತ್ತದೊ ಅದಕ್ಕೆ ಬಳಸದಂತೆ ಮಾಡುತ್ತಾರೆ. ಸ್ಥಳೀಯವಾಗಿ ಕಾನೂನು ಸಮಸ್ಯೆಯನ್ನು ತಂದೊಡ್ಡುತ್ತಾರೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗುತ್ತದೆ. ಅದನ್ನು ತಡೆಗಟ್ಟುವುದಕ್ಕೆ ನೀವು ಏನಾದರೂ ಆಲೋಚನೆ ಮಾಡುತ್ತೀರಾ ಎಂದು ಅವರು ಕೇಳಿರುವುದು.

ಶ್ರೀ ವಿ. ಸೋಮಣ್ಣ :— ಅದಕ್ಕೋಸ್ಕರ ನಾವು ನಾಮಫಲಕಗಳನ್ನು ಹಾಕುತ್ತೇವೆ. ರೀತಿಯಾಗಿ ಪಾರ್ಕ್‌ಗಳಲ್ಲಿ ಆಟದ ಮೈದಾನಕ್ಕೆಂದು ಇರತಕ್ಕ ಜಾಗದಲ್ಲಿ ಏನು ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ತರಿಸಿಕೊಳ್ಳುತ್ತೇನೆ.

ಅಧ್ಯಕ್ಷರು :— ಮಂತ್ರಿಗಳು ಒಂದು ಕೆಲಸ ಮಾಡಿ. ಅನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮಾನ್ಯ ಸದಸ್ಯರ ಪ್ರಶ್ನೆಯನ್ನು ಅವರು ಅರ್ಥಮಾಡಿಕೊಂಡಿದ್ದಾರೆ. I have understood your question. I will request him to come up with a proper reply at the right time.

ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಯಲು ಕ್ರಮ ಕೈಗೊಳ್ಳುವುದು.

2 (136) ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) :— ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಆ) ಬೆಂಗಳೂರು ನಗರದಲ್ಲಿರುವ ಜನಸಂಖ್ಯೆ ಎಷ್ಟು?